KARNATAKA LEGISLATIVE ASSEMBLY RESEARCH AND REFERENCE BRANCH
PAPER CLIPPINGS
DEPARTMENT / SUBJECT:
NAME OF THE NEWS PAPER: ಪ್ರಜಾವಾಣಿ
DATE: 23/12/2019



ಪ್ರಮಾಣ ವಚನ ಸ್ವೀಕರಿಸಿದ ನೂತನ ಶಾಸಕರೊಂದಿಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಿ.ಎಂ ಬಿ.ಎಸ್‌.ಯಡಿಯೂರಪ್ಪ, ಸಚಿವರಾದ ಆರ್‌.ಅಶೋಕ, ಬಸವರಾಜ ಬೊಮ್ಮಾಯಿ, ಎಸ್‌.ಸುರೇಶ್‌ಕುಮಾರ್ ಇದ್ದರು

# 13 ಶಾಸಕರ ಪ್ರಮಾಣ ವಚನ

ಪ್ರಜಾವಾಣಿ ವಾರ್ತೆ 23-12-19

ಬೆಂಗಳೂರು: ವಿಧಾನಸಭೆ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ 15 ಅಭ್ಯರ್ಥಿಗಳಲ್ಲಿ 13 ಮಂದಿ ಭಾನುವಾರ ವಿಧಾನಸೌಧದಲ್ಲಿ ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಪ್ರಮಾಣವನ್ನು ಬೋಧಿಸಿ, ಎಲ್ಲರಿಗೂ ಸಂವಿಧಾನದ ಪ್ರತಿಗಳನ್ನು ನೀಡಿದರು. ಪ್ರಮಾಣ ವಚನ ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಹುಣಸೂರು ಕ್ಷೇತ್ರದ ಎಚ್‌.ಪಿ.ಮಂಜುನಾಥ್, ಶಿವಾಜಿನಗರ ಕ್ಷೇತ್ರದಿಂದ ಆಯ್ಕೆಯಾಗಿರುವ ರಿಜ್ವಾನ್ ಅರ್ಷದ್ ಭಾಗವಹಿಸಿರಲಿಲ್ಲ.

ಪ್ರಮಾಣ ಸ್ವೀಕರಿಸಿದವರು: ಮಹೇಶ ಕುಮಠಳ್ಳಿ- ಅಥಣಿ, ಶ್ರೀಮಂತ ಪಾಟೀಲ- ಕಾಗವಾಡ, ರಮೇಶ ಜಾರಕಿಹೊಳಿ- ಗೋಕಾಕ, ಶಿವರಾಮ್ ಹೆಬ್ಬಾರ್- ಯಲ್ಲಾಪುರ, ಬಿ.ಸಿ. ಪಾಟೀಲ- ಹಿರೇಕೆರೂರು, ಅರುಣ್ ಕುಮಾರ್ ಗುತ್ತೂರು- ರಾಣೆಬೆನ್ನೂರು, ಆನಂದ ಸಿಂಗ್- ವಿಜಯನಗರ, ಡಾ.ಕೆ.ಸುಧಾಕರ್- ಚಿಕ್ಕಬಳ್ಳಾಪುರ, ಬೈರತಿ ಬಸವರಾಜ್- ಕೃಷ್ಣರಾಜಪುರ, ಎಸ್‌.ಟಿ.ಸೋಮಶೇಖರ್- ಯಶವಂತಪುರ, ಕೆ.ಗೋಪಾಲಯ್ಯ- ಮಹಾಲಕ್ಷ್ಮಿ ಲೇಔಟ್, ಎಂ.ಸಿ.ನಾರಾಯಣಗೌಡ- ಕೆ.ಆರ್‌.ಪೇಟೆ (ಎಲ್ಲರೂ ಬಿಜೆಪಿ). ಹೊಸಕೋಟೆ- ಶರತ್ ಬಚ್ಚೇಗೌಡ (ಪಕ್ಷೇತರ).

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಸಚಿವರಾದ ಆರ್. ಅಶೋಕ್, ಬಸವರಾಜ ಬೊಮ್ಮಾಯಿ, ಎಸ್.ಸುರೇಶ್ ಕುಮಾರ್, ಎಚ್. ನಾಗೇಶ್ ಹಾಜರಿದ್ದರು.

## ಶರತ್ ಬಚ್ಚೇಗೌಡ ಆಕರ್ಷಣೆಯ ಕೇಂದ್ರ

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಶರತ್ ಬಚ್ಚೇಗೌಡ ಆಕರ್ಷಣೆಯ ಬಿಂದುವಾಗಿದ್ದರು. ಬಾಂಕ್ವೆಟ್ ಸಭಾಂಗಣದಲ್ಲಿ ಅವರ ಅಭಿಮಾನಿಗಳು ಮತ್ತು ಬೆಂಬಲಿಗರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು.

ಪ್ರಮಾಣ ಸ್ವೀಕರಿಸುವಾಗ ಬೆಂಬಲಿಗರ ಹರ್ಷೋದ್ಗಾರ ಮುಗಿಲು ಮುಟ್ಟುವಂತಿತ್ತು. ಪ್ರಮಾಣ ಸ್ವೀಕರಿಸಿದವರಲ್ಲಿ ಶರತ್ ಅತ್ಯಂತ ಕಿರಿಯ ವಯಸ್ಸಿನವರು. 'ಸ್ವಾಭಿಮಾನಿ ಶರತ್ ಬಚ್ಚೇಗೌಡ', 'ಸೂಪರ್ ಸ್ಟಾರ್ ಬಚ್ಚೇಗೌಡ'... ಇತ್ಯಾದಿ ಘೋಷಣೆಗಳು ಮೊಳಗಿದವು.

ಪ್ರಮಾಣ ಸ್ವೀಕಾರ ಕಾರ್ಯಕ್ರಮ ಮುಗಿದ ಬಳಿಕ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಶರತ್ ಮಾತನಾಡಲು ಬಂದಾಗ ನೋಡದೇ ಮುಂದಕ್ಕೆ ಹೋದರು. ಸಚಿವ ಆರ್. ಅಶೋಕ ಕೂಡ ಮಾತನಾಡಿಲ್ಲ. ಇದರಿಂದ ಶರತ್ ಬೇಸರಗೊಂಡರು. ಆದರೆ, ಬೆಂಬಲಿಗರು ಜೈಕಾರ ಮಧ್ಯೆ ಅವರು ಸಭಾಂಗಣದಿಂದ ಹೊರ ನಡೆದರು.